<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

ಸಿ.ಸಿ.93/2024

<u>ಸಾಕ್ಷಿದಾರರ ಹೇಳಿಕೆಃ</u>

| | | | | |
|---|---|---|---|---|
| ಹೆಸರು | : | ಲಕ್ಷ್ಮಣ | CW: 11 | PW: 4 |
| ತಂದೆಯ ಹೆಸರು | : | ಶಿವಪುತ್ರಪ್ಪ | | |
| ವಯಸ್ಸು | : | 27 | | |
| ವೃತ್ತಿ | : | ಅಡಿಕೆ ಕೆಲಸ | | |
| ವಾಸಸ್ಥಳ | : | ಮಲವಗೊಪ್ಪ, ಶಿವಮೊಗ್ಗ ತಾಲ್ಲೂಕು | | |

ದಿನಾಂಕಃ 24.04.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

<u>ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–</u>

ಚಾಸಾ 7 ಮತ್ತು 12 ರವರು ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಪಂಚನಾಮೆ ಜರುಗಿಸಿಲ್ಲ. ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ.

ಪೋಲೀಸರ ಕೋರಿಕೆಯ ಮೇರೆಗೆ ಕೆಲವು ದಾಖಲೆಗಳಿಗೆ ನಾನು ಸಹಿಯನ್ನು ಮಾಡಿರುತ್ತೇನೆ ಆದರೆ ಅದರಲ್ಲಿ ಏನು ಬರೆದಿದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ 4, 5, 7 ಮತ್ತು 8 ಛಾಯಾಚಿತ್ರಗಳಲ್ಲಿ ತಾನು ಇರುವ ಬಗ್ಗೆ ನೋಡಿ ಗುರುತಿಸಿದ್ದು ಅದನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಪಿ 2 ಸ್ಥಳ ಪಂಚನಾಮೆ, ನಿಪಿ 6 ವಾಹನ ಪಂಚನಾಮೆಗಳಲ್ಲಿ ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿಪಿ 2(ಬಿ) ಮತ್ತು 6(ಬಿ) ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ದಿಃ 08.09.2023 ರಂದು ಪೋಲೀಸರು ಚಾಸಾ 7 ರವರು ಸ್ಥಳ ತೋರಿಸಿದ ಮೇರೆಗೆ ನನ್ನ, ಚಾಸಾ 7 ಮತ್ತು 12 ರವರ ಸಮಕ್ಷಮ ಸಂಜೆ 4.30 ರಿಂದ 5.15 ಗಂಟೆ ಸಮಯದಲ್ಲಿ ನಿಪಿ 2 ರಂತೆ ಸ್ಥಳ ಪಂಚನಾಮೆ ಜರುಗಿಸಿ, ನಿಪಿ 3 ರಂತೆ ಕಚ್ಚಾ ನಕಾಶೆ ತಯಾರಿಸಿ , ನಿಪಿ 4 ಮತ್ತು 5 ರಂತೆ ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ನನ್ನ, ಚಾಸಾ 7 ಮತ್ತು 12 ರವರ ಸಮಕ್ಷಮ ಸವಳಂಗ ಉಪಪೋಲೀಸ್ ಠಾಣಾ ಆವರಣದಲ್ಲಿ ಸಂಜೆ 5.45 ರಿಂದ 6.30 ರ ಗಂಟೆ ಸಮಯದಲ್ಲಿ ನಿಪಿ 6 ರಂತೆ ವಾಹನ ಪಂಚನಾಮೆ ಜರುಗಿಸಿ ಕೆಎ 14 ಇಡಬ್ಲ್ಯೂ 4162 ನಂಬರ್ ನ ಬೈಕನ್ನು ಮತ್ತು ಕೆಎ 14 ಎನ್ 2712 ನಂಬರ್ ನ ಸ್ಯಾಂಟ್ರೊ ಕಾರನ್ನು ವಶಪಡಿಸಿಕೊಂಡು ನಿಪಿ 7 ಮತ್ತು 8 ರಂತೆ ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ-

ಆರೋಪಿ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.